೭೭ ರಿಂದ ೮೦ ಪರ್ಸೆಂಟ್‌ವರೆಗೂ ಉದ್ಯೋಗಾವಕಾಶಗಳು ಸಿಕ್ಕಿವೆ. ಮಾನ್ಯ ಸದಸ್ಯರು ಮತ್ತೊಂದು ಸಾರ್ವಜನಿಕ ಉದ್ದಿಮೆ ಬಗ್ಗೆ ಪ್ರಸ್ತಾಪ ಮಾಡಿದರು. ಆ ಬಗ್ಗೆ ನಾನು ನಿಗಾ ವಹಿಸಿ ಆಗಿರುವಂತಹ ಅನ್ಯಾಯವನ್ನು ಸರಿಪಡಿಸುವುದಕ್ಕೆ ಪ್ರಯತ್ನ ಪಡುತ್ತೇನೆ ಆಮೇಲೆ ಶ್ರೀಮತಿ ಸರೋಜಿನಿ ಮಹಿಷಿ ಯವರ ವರದಿಯನ್ನು ಇಂಪ್ಲಿಮೆಂಟ್ ಮಾಡುವ ಬಗ್ಗೆ ಇನ್ನೂ ಸರ್ಕಾರ ಆಜ್ಞೆ ಹೊರಡಿಸಿಲ್ಲ. ಆ ಆಜ್ಞೆಯನ್ನು ಹೊರಡಿಸಿದ ಮೇಲೆ ನಾನು ಎಲ್ಲಾ ಕಾರ್ಖಾನೆಗಳಿಗೆ ಆದೇಶ ಕೊಡುತ್ತೇನೆ.

ಮೇಕೆದಾಟು—ಹೊಗೆನಿಕಲ್ ಬಳಿ ವಿದ್ಯುತ್ ಉತ್ಪಾದನೆ

೧೬೪ (೩೮೦ ಡಿ) ಶ್ರೀ ಬಿ. ರಾಜುಗೌಡ (ಹನೂರು).—ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸರ್ಕಾರವು ಮೇಕೆದಾಟು, ಹೊಗೆನಿಕಲ್ ಬಳಿ ವಿದ್ಯುತ್ ಉತ್ಪಾದನೆ ಮಾಡಲು ಸಮೀಕ್ಷೆ ನಡೆಸಿದೆಯೇ ?

ಆ) ಹಾಗಿದ್ದಲ್ಲಿ, ಈ ಯೋಜನೆಗೆ ತಗಲಬಹುದಾದ ವೆಚ್ಚ ಎಷ್ಟು ಹಾಗೂ ಈ ಯೋಜನೆಯಿಂದ ದೊರೆಯಬಹುದಾದ ವಿದ್ಯುತ್ ಪ್ರಮಾಣವೆಷ್ಟು ?

ಶ್ರೀ ಜಿ. ಪರಮೇಶ್ವರ್ ನಾಯ್ಕ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಮೇಕೆದಾಟು ಯೋಜನೆಯ ಸಮೀಕ್ಷೆ ಪೂರ್ಣಗೊಂಡಿದೆ. ಹೊಗೆನಿಕಲ್ ಯೋಜನೆಯ ಸಮೀಕ್ಷೆ ಮಾಡಿಲ್ಲ. ಹೊಗೆನಿಕಲ್ ಸೈಟ್ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಗಡಿಯಲ್ಲಿದೆ.

ಆ) ಮೇಕೆದಾಟು ಯೋಜನೆಯ ವೆಚ್ಚ ರೂ. ೪೫೦ ಕೋಟಿ. ವರ್ಷಕ್ಕೆ ೭೨೨ ದಶಲಕ್ಷ ವಿದ್ಯುತ್ ಉತ್ಪಾದನೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಪ್ರಸಕ್ತ ಸಾಲಿನಲ್ಲಿ ವಿದ್ಯುಚ್ಛಕ್ತಿ ಕೊರತೆ ಇದೆಯೇ ? ಎರಡನೆಯದಾಗಿ ಮೇಕೆದಾಟು ಯೋಜನೆಗೆ ಈ ವರ್ಷದ ಆಯ ವ್ಯಯದಲ್ಲಿ ಎಷ್ಟು ಹಣವನ್ನು ಒದಗಿಸಿಕೊಡುವ ನಿರೀಕ್ಷೆ ಇದೆ ? ಒಂದು ವೇಳೆ ಹಣವನ್ನು ಒದಗಿಸಿಕೊಡುವುದಾದರೆ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಜಿ. ಪರಮೇಶ್ವರ್ ನಾಯ್ಕ್.—ಮಾನ್ಯ ಅಧ್ಯಕ್ಷರೇ, ಮೇಕೆದಾಟು ಯೋಜನೆಯ ಸಮೀಕ್ಷೆ ಕೆಲಸ ನಡೆದಿದೆ. ಆದರೆ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುಮತಿ ದೊರೆತಿಲ್ಲ. ಹೊಗೆನಕಲ್ ಸೈಟ್ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಗಡಿಯಲ್ಲಿದೆ. ಈ ಎರಡೂ ರಾಜ್ಯಗಳ ನೀರಾವರಿ ವಿವಾದಗಳು ಇದ್ದು ಇದರ ಸಮೀಕ್ಷೆ ಕೆಲಸ ನಡೆದಿಲ್ಲ. ರಾಜ್ಯದಲ್ಲಿ, ವಿದ್ಯುಚ್ಛಕ್ತಿಯ ಕೊರತೆ ಇರುವುದರಿಂದ ಈ ಯೋಜನೆ ಬಗ್ಗೆ ಅನುಮತಿ ಕೊಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸ ಲಾಗಿದೆ. ಮೇಕೆದಾಟು ಯೋಜನೆ ಮಾಡುವುದರಿಂದ ನೀರಾವರಿಗೆ ತೊಂದರೆಯಾಗುವುದಿಲ್ಲ ಹೇಗೆಂದರೆ, ನೀರನ್ನು ಉಪಯೋಗಿಸಿಕೊಂಡು ಮತ್ತೆ ನೀರನ್ನು ಒಳಗೆ ಬಿಡುತ್ತೇವೆ. ಆದರೆ ಮೇಕೆದಾಟಿಗೆ ಕೇಂದ್ರ ಸರ್ಕಾರದ ಪರವಾನಗಿ ಇನ್ನೂ ಸಿಕ್ಕಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಖಚಿತವಾದ ಯಾವುದೇ ರೀತಿಯ ಉತ್ತರ ಬಂದಿಲ್ಲ. ನಮ್ಮ ಸರ್ಕಾರ ತಮಿಳುನಾಡಿನ ಸರ್ಕಾರಕ್ಕೆ ಒಂದು ಮಾತನ್ನು ಹೇಳಿದೆ. ಅದೇನೆಂದರೆ, ನಮ್ಮ ನಿಮ್ಮ ನೀರಿನ ವಿವಾದ ಏನೇ ಇರಲಿ, ನಮಗೀಗ ವಿದ್ಯುಚ್ಛಕ್ತಿಯ ಕೊರತೆ ಇದೆ, ಆದ್ದರಿಂದ ನಿಮ್ಮ ಒಪ್ಪಿಗೆ ಕೊಡಿ, ನೀರಿನ ವಿಚಾರ ಆಮೇಲೆ ನೋಡೋಣವೆಂದು ಹೇಳಿದ್ದೆವು. ಯಾವುದ್ದಕ್ಕೂ ಕೂಡ ಕೇಂದ್ರ ಸರ್ಕಾರದಿಂದ ಪರವಾನಿಗೆ ಬಂದಿಲ್ಲ. ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಬೇಡಿಕೆ ಸುಮಾರು ೧೨ ಸಾವಿರ ಮಿಲಿಯನ್ ಯೂನಿಟ್‌ನಷ್ಟು ಇದೆ. ಇದರಲ್ಲಿ ೧೦ ಸಾವಿರ ಮಿಲಿಯನ್ ಯೂನಿಟ್‌ನಷ್ಟು ಕಿಗುತ್ತಿದೆ. ಇನ್ನೂ ಎರಡೂವರೆ ಸಾವಿರ ಮಿಲಿಯನ್ ಯೂನಿಟ್‌ನಷ್ಟು ಕೊರತೆ ಇದೆ.

ಶ್ರೀ ಜಿ. ರಾಜುಗೌಡ.—ಈಗ ಈ ಹೊಗೆನಕಲ್ ವಿದ್ಯುಚ್ಛಕ್ತಿ ಯೋಜನೆಯನ್ನು ತಮಿಳುನಾಡು ಮತ್ತು ನಮ್ಮ ರಾಜ್ಯಗಳು ಸೇರಿ ಸಂಯುಕ್ತವಾಗಿ ಮಾಡುವುದಕ್ಕೆ ಏನಾದರೂ ಸರ್ಕಾರ ಯೋಜನೆ ಹಾಕಿಕೊಂಡಿದೆಯೇ ? ಒಂದು ವೇಳೆ ಆ ರೀತಿ ಇದ್ದರೆ ಅದಕ್ಕೆ ತಮಿಳುನಾಡು ಸರ್ಕಾರ ಒಪ್ಪಿಕೊಳ್ಳುತ್ತದೆಯೇ ?

ಶ್ರೀ ಜೆ. ಹೆಚ್. ಪಟೇಲ್.—ಸಂಯುಕ್ತ ಯೋಜನೆ ಮಾಡುವುದಕ್ಕೆ ನಾವು ಅವರನ್ನು ಕೇಳಿದ್ದೇವೆ. ನಮ್ಮ ರಾಜ್ಯದ ಹಿತದೃಷ್ಟಿಯಿಂದ ನಾವು ಈ ಕೆಲಸವನ್ನು ಮಾಡಿದ್ದೇವೆ. ಆದರೆ ಹೊಗೆನಕಲ್ ಯೋಜನೆ ತಮಿಳುನಾಡಿನ ವ್ಯಾಪ್ತಿಯಲ್ಲಿ ಬರುತ್ತದೆ. ಮೇಕೆದಾಟು ಯೋಜನೆ ಕರ್ನಾಟಕ ರಾಜ್ಯದಲ್ಲಿ ಬರುತ್ತದೆ. ಈ ಎರಡೂ ಯೋಜನೆಗಳನ್ನು ಮಾಡಿದರೆ ನಮಗೆ ವಿದ್ಯುಚ್ಛಕ್ತಿ ಹಕ್ಕು ಬರುತ್ತದೆ. ಆಗ ಅವರು ನೀರನ್ನು ತಮ್ಮ ಬೆಳೆಗೆ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಆದರೆ ನಮ್ಮ ರಾಜ್ಯಕ್ಕೂ ತಮಿಳುನಾಡಿಗೂ ನೀರಿನ ಹಂಚಿಕೆಯಲ್ಲಿ ವಿವಾದವಿರುವುದರಿಂದ ಇದು ಇನ್ನೂ ಇತ್ಯರ್ಥವಾಗಿಲ್ಲ. ಈ ಬಗ್ಗೆ ನಾವು ಕೇಂದ್ರ ಸರ್ಕಾರವನ್ನು ಸಹ ಒತ್ತಾಯಿಸುತ್ತಿದ್ದೇವೆ. ಇದುವರೆಗೆ ಕೇಂದ್ರ ಸರ್ಕಾರದಿಂದ ನಮಗೆ ಯಾವುದೇ ರೀತಿಯ ಉತ್ತರ ಬಂದಿಲ್ಲ.

ಶ್ರೀ ಶಿವಲಿಂಗೇಗೌಡ.—ಮೇಕೆದಾಟು ಯೋಜನೆಯ ಸರ್ವೆ ಕಾರ್ಯ ಮುಗಿದಿದೆ ಎಂದು ಹೇಳಿದ್ದೀರಿ, ಅಂದ ಮೇಲೆ ಕೆಲಸ ಪ್ರಾರಂಭಿಸಬಹುದಿತ್ತು, ಕೆಲಸ ಪ್ರಾರಂಭಿಸಲು ತಮಿಳುನಾಡು ಸರ್ಕಾರದವರಿಂದ ಏನಾದರು ಅಡ್ಡಿ ಇದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಜೆ. ಹೆಚ್. ಪಟೇಲ್.—ನೀರು ಬಳಸುವುದಕ್ಕೋಸ್ಕರ ಮಾತ್ರ ಅಡ್ಡಿ ಇದೆ. ನಾವು ಸರ್ವೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಕೇಂದ್ರದವರು ಅನುಮತಿ ಕೊಟ್ಟರೆ ಕೆಲಸವನ್ನು ಪ್ರಾರಂಭ ಮಾಡಿಸುತ್ತೇವೆ.

ರಾಜ್ಯದಲ್ಲಿ ಕೈಮಗ್ಗದ ಕೈಗಾರಿಕಾ ಅಭಿವೃದ್ಧಿ ಬಗ್ಗೆ

೧೮೫ (೪೫೧) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ) ಮಾನ್ಯ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೈಮಗ್ಗಕ್ಕೆ ಪ್ರತ್ಯೇಕ ನಿರ್ದೇಶನಾಲಯ ಸ್ಥಾಪಿಸುವ ಬಗ್ಗೆ ಸರ್ಕಾರದವರು ನಿರ್ಧರಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ?

ಇ) ಕೈಮಗ್ಗದ ಅಭಿವೃದ್ಧಿಗೆ ರಾಜ್ಯ ಸರ್ಕಾರದವರು ಕೈಗೊಂಡಿರುವ ಪ್ರೋತ್ಸಾಹಕ ಕ್ರಮಗಳೇನು ?

ಈ) ದಿಶೆಯಲ್ಲಿ ವಿಶೇಷ ಯೋಜನೆಯನ್ನೇನಾದರೂ ಯೋಜಿಸಲಾಗಿದೆಯೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಇಲ್ಲ, ಈ ವಿಷಯ ಇನ್ನೂ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಸರ್ಕಾರವು ಈ ಕೆಳಕಂಡ ವಿವಿಧ ಪ್ರವರ್ತನಾ ಯೋಜನೆಗಳನ್ನು ಕೈ ಕೊಂಡಿದೆ:—

೧) ನೇಕಾರರ ವಸತಿ ಯೋಜನೆ.
೨) ಸಾಮೂಹಿಕ ನೇಯ್ಗೆ ಕೇಂದ್ರಗಳ ಸ್ಥಾಪನೆ.
೩) ಬಣ್ಣದ ಮನೆ ಯೋಜನೆ.
೪) ಷೇರು ಸಾಲ ಮತ್ತು ಅನುದಾನ ನೀಡಿಕೆ.
೫) ಕೈಮಗ್ಗದ ಬಟ್ಟೆ ಮೇಲಿನ ಸೋಡಿ ನೀಡಿಕೆ.
೬) ಸುಧಾರಿತ ಮಗ್ಗಗಳ ಅನುದಾನ ಮತ್ತು ಸಾಲ ನೀಡಿಕೆ.
೭) ನೇಕಾರರ ಮಿತವ್ಯಯ ನಿಧಿ ಯೋಜನೆ.
೮) ಜನತಾ ಬಟ್ಟೆಗಳ ಮೇಲೆ ಅನುದಾನ ನೀಡಿಕೆ.
೯) ನೇಕಾರರಿಗೆ ತರಬೇತಿ ಸೌಲಭ್ಯ ನೀಡಿಕೆ.
೧೦) ನೇಕಾರರಿಗೆ ಪ್ರವಾಸ ಯೋಜನೆ.
೧೧) ಹಿಬ್ಬಂದಿ ವೆಚ್ಚದ ಅನುದಾನ.
೧೨) ನೂಲು ವಿತರಣೆ.
೧೩) ಸೀರೆ ಮತ್ತು ಪಂಚೆಗಳ ವಿತರಣೆ ಯೋಜನೆ.